SC: 111/2021
PW:21 CW:30

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

| |
|---|
| ಹೇಳಿಕೆ ಹಾಳೆ<br>ಆರ್.ಪಿ. ಸಂಖ್ಯೆ 57<br>ನಮೂನೆ ಸಂಖ್ಯೆ 4<br>(ಸಿವಿಲ್) |

## 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆ: 111/2021

| | |
|---|---|
| PW | 21 |
| CW | 30 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 21.11.2024.

| | | |
|---|---|---|
| ಸಾಕ್ಷಿಯ ಹೆಸರು | : | ಸರ್ತಾಜ್ |
| ತಂದೆಯ ಹೆಸರು | : | ಅಬ್ದುಲ್ ಷರೀಪ್ |
| ವಯಸ್ಸು | : | 50 ವರ್ಷ |
| ಉದ್ಯೋಗ | : | SDA ತಾಲ್ಲೂಕು ಪಂಚಾಯಿತಿ |
| ವಾಸಸ್ಥಳ | : | ಕಾದಲವೇಣಿ |

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:**

1. ನನಗೆ ಮೃತ ವಿಶ್ವನಾಥ ಇವರ ಪರಿಚಯ ಇತ್ತು. ನನಗೆ ಈ ಪ್ರಕರಣದ ಯಾವುದೇ ಸಾಕ್ಷಿದಾರರ ಪರಿಚಯ ಇಲ್ಲ. ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ 2 ಮತ್ತು 4 ನೇ ಆರೋಪಿತರನ್ನು ಹಾಗೂ ಈ ದಿನ ನ್ಯಾಯಾಲಯದ ಮುಂದೆ ವಿ ಸಿ ಮುಖಾಂತರ ಹಾಜರುಪಡಿಸಿದ 1 ಮತ್ತು 3 ನೇ ಆರೋಪಿತರನ್ನು ನೋಡಿದ್ದೇನೆ.

2. ಸುಮಾರು 3 ವರ್ಷದ ಹಿಂದೆ ಪೊಲೀಸರು ನಮ್ಮನ್ನು ಗೌರಿಬಿದನೂರು ಬೈಪಾಸ್ ಹತ್ತಿರ ಕರೆಯಿಸಿದ್ದರು. ವಿಶ್ವನಾಥ ಇವರನ್ನು ಕೊಲೆ ಮಾಡಿದ ಜಾಗವನ್ನು ಆರೋಪಿತರು ಪೊಲೀಸರಿಗೆ ತೋರಿಸಿರುತ್ತಾರೆ. ಸಾಕ್ಷಿದಾರರು ಕೃತ್ಯ ಸ್ಥಳದ ಪಂಚನಾಮೆಯಲ್ಲಿರುವ ತಮ್ಮ

ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ 41 ಎಂದು ಸಾಕ್ಷಿದಾರರ ಸಹಿಯನ್ನು ನಿ.ಪಿ 41(ಎ) ಎಂದು ಗುರುತಿಸಲಾಯಿತು. ನಿ.ಪಿ 41 ರ ಜೊತೆ ಅಳವಡಿಸಿರುವ ಫೋಟೋದಲ್ಲಿ ನಾನು ಇದ್ದು ನನ್ನ ಜೊತೆ ಚಾಸಾ-29 ರವರು ಫೋಟೋದಲ್ಲಿ ಇರುವುದು ಕಂಡು ಬಂದಿರುತ್ತದೆ. ಅದೇ ರೀತಿ ಸದರಿ ಫೋಟೋದಲ್ಲಿ 4 ಜನ ಆರೋಪಿತರು ಇರುವುದು ಕಂಡು ಬಂದಿರುತ್ತದೆ.

3. ಪೊಲೀಸರು ಆರೋಪಿತರನ್ನು ವಿಚಾರಿಸಿದಾಗ ವಿಶ್ವನಾಥ ಇವರನ್ನು ದೊಣ್ಣೆಯಿಂದ ಕೊಲೆ ಮಾಡಿರುವುದಾಗಿ ಆರೋಪಿತರು ತಿಳಿಸಿರುತ್ತಾರೆ. ಪೊಲೀಸರು ಆರೋಪಿತರಿಂದ ದೊಣ್ಣೆಯನ್ನು ಜಪ್ತಿ ಪಡಿಸಿರುತ್ತಾರೆ. ವಿಶ್ವನಾಥ ಇವರನ್ನು ಕೊಲೆ ಮಾಡುವ ಸಮಯದಲ್ಲಿ ಅವರಿಂದ ಏನಾದರೂ ವಸ್ತುಗಳನ್ನು ತೆಗೆದುಕೊಂಡ ಬಗ್ಗೆ ಆರೋಪಿತರು ನನ್ನ ಮುಂದೆ ಪೊಲೀಸರಿಗೆ ಏನನ್ನು ಹೇಳಿಲ್ಲ. ನಿ.ಪಿ 41 ಕ್ಕೆ ನನ್ನ ಜೊತೆ ಚಾಸಾ-29 ರವರು ಸಹಿ ಮಾಡಿರುತ್ತಾರೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸೀಲ್ ಆದ ಬಟ್ಟೆ ಕವರನ್ನು ತೆರೆದು ಅದರಲ್ಲಿರುವ ವಸ್ತುವನ್ನು ಸಾಕ್ಷಿದಾರರಿಗೆ ತೋರಿಸಲು ಅನುಮತಿ ಕೋರಿದ್ದು ನೀಡಲಾಯಿತು.**

4. ಸಾಕ್ಷಿದಾರರಿಗೆ ಬಟ್ಟೆ ಕವರನ್ನು ತೆರೆದು ವಸ್ತುವನ್ನು ತೋರಿಸಿದಾಗ ಸಾಕ್ಷಿಯು ಅದೇ ದೊಣ್ಣೆ ಎಂದು ಗುರುತಿಸಿದ್ದು ಅದನ್ನು ಮು.ಮಾ 6 ಎಂದು ಗುರುತಿಸಲಾಯಿತು.

5. ಸಾಕ್ಷಿದಾರರು ಮತ್ತೊಂದು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ 42 ಸಾಕ್ಷಿದಾರರ ಸಹಿಯನ್ನು ನಿ.ಪಿ 42(ಎ) ಎಂದು ಗುರುತಿಸಲಾಯಿತು. ನಿ.ಪಿ 42 ರ ಜೊತೆ ಅಳವಡಿಸಿದ ಫೋಟೋದಲ್ಲಿ ನಾನು ಹಾಗೂ ಚಾಸಾ-29 ರವರು ಇರುವುದಾಗಿ ಗುರುತಿಸಿರುತ್ತಾರೆ. ನಾನು ಮಹಜರ್ ಗಳಿಗೆ ಸಾಕ್ಷಿದಾರನಾಗಿ ಹಾಜರಾದ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

SC: 111/2021
PW:21 CW:30

**<u>ಪಾಟೀ ಸವಾಲುಃ 2 ಮತ್ತು 4 ಆರೋಪಿತರಪರ ಶ್ರೀ ಕೆ ಎಸ್ ಎನ್ ವಕೀಲರಿಂದಃ</u>**

6. ನಿ.ಪಿ 41 ಹಾಗೂ 42 ಮಹಜರ್ ಗೆ ಸಹಕರಿಸುವಂತೆ ನನ್ನ ಮೇಲಾಧಿಕಾರಿಗಳು ನನಗೆ ಆದೇಶ ಮಾಡಿದ್ದರು. ನನ್ನ ಮೇಲಾಧಿಕಾರಿಗಳು ನೀಡಿದ ಆದೇಶದ ಪ್ರತಿಯನ್ನು ನಾನು ಪೊಲೀಸರಿಗೆ ನೀಡಿರಲಿಲ್ಲ. ಮೃತ ವಿಶ್ವನಾಥ ಇವರು 3-4 ತಿಂಗಳಿಂದ ಪರಿಚಯ ಆಗಿದ್ದು ನಮ್ಮಿಬ್ಬರ ಮಧ್ಯ ಯಾವುದೇ ವ್ಯವಹಾರ ಇರಲಿಲ್ಲ. ಮೃತ ವಿಶ್ವನಾಥ ಇವರು ಶಾಲೆಗೆ ಎಷ್ಟು ಹೊತ್ತಿಗೆ ಹೋಗಿ ಎಷ್ಟು ಹೋತ್ತಿಗೆ ವಾಪಸ್ಸು ಬರುತ್ತಿದ್ದರು ಎಂದು ನನಗೆ ತಿಳಿದಿಲ್ಲ. ನಾನು ಯಾವುದೇ ಸಮಯದಲ್ಲಿ ಮೃತ ವಿಶ್ವನಾಥ ಮನೆಗೆ ಭೇಟಿ ನೀಡಿರಲಿಲ್ಲ. ಮೃತ ವಿಶ್ವನಾಥ ಇವರು ಯಾವುದೇ ಸಮಯದಲ್ಲಿ ಆರೋಪಿತರ ಜೊತೆ ಇರುವುದನ್ನು ನಾನು ನೋಡಿಲ್ಲ. ಪೊಲೀಸರು ಸಹಿ ಮಾಡಲು ಹೇಳಿದ ಕಾರಣ ನಾನು ನಿ.ಪಿ 41 ಮತ್ತು 42 ಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ನಾನು ಮಹಜರ್ ಸ್ಥಳಗಳಿಗೆ ಹೋಗಿರುತ್ತೇನೆ ಎಂದು ನುಡಿದಿರುತ್ತಾರೆ.

7. ನಾನು ಮಹಜರ್ ಮಾಡಿದ ಸ್ಥಳಕ್ಕೆ ಹೋಗಿರಲಿಲ್ಲ , ಅವುಗಳಿಗೆ ನಾನು ಮಹಜರ್ ಸ್ಥಳದಲ್ಲಿ ಸಹಿ ಮಾಡಿರುವುದಿಲ್ಲ, ನಿ.ಪಿ 41 ಹಾಗೂ 42 ಹಾಗೂ ಮು.ಮಾ 6 ದೊಣ್ಣೆಯನ್ನು ಪೊಲೀಸರು ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸರ್ಕಾರಿ ಅಧಿಕಾರಿಯಾಗಿರುವ ಕಾರಣ ನನಗೆ ಪೊಲೀಸರು ತೊಂದರೆ ಕೊಡುತ್ತಾರೆ ಎನ್ನುವ ಕಾರಣ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮಹಜರ್ ಸ್ಥಳಗಳಿಗೆ ಹೋಗಿರುತ್ತೇನೆ ಎಂದು ಹೇಳಿದ ಸ್ಥಳಗಳ ಅಕ್ಕ-ಪಕ್ಕದಲ್ಲಿ ವಿದ್ಯುತ್ ಸಂಪರ್ಕ ಇಲ್ಲ ಎಂದರೆ ಸರಿ. ಪೊಲೀಸರು ಸದರಿ ಸ್ಥಳಗಳಲ್ಲಿ ಕೈ ಬರವಣಿಗೆ ಮಾಡಿರುತ್ತಾರೆ. ನಿ.ಪಿ 41 ಮತ್ತು 42 ರಲ್ಲಿ

ಅಳವಡಿಸಿರುವ ಫೋಟೋಗಳನ್ನು ಯಾರು ತೆಗೆದಿರುತ್ತಾರೆ ಎಂದು ನನಗೆ ಹೇಳಲಾಗವುದಿಲ್ಲ. ನಿ.ಪಿ 41 ಮತ್ತು 42 ರ ಪ್ರಿಂಟ್ ನ್ನು ಪೊಲೀಸ್ ಠಾಣೆಯಲ್ಲಿ ತೆಗೆದಿದ್ದು ಅವುಗಳಿಗೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಸ್ಥಳದಲ್ಲಿ ಪ್ರಿಂಟ್ ತೆಗೆದಿರುತ್ತಾರೆ ಎಂದು ನುಡಿದಿರುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿಪರ ಶ್ರೀ ಎ ಸಿ ಡಿ ವಕೀಲರಿಂದಃ**

8. ನಾನು ಇದೇ ದಿನ ಮೊದಲ ಬಾರಿಗೆ 1 ನೇ ಆರೋಪಿಯನ್ನು ನ್ಯಾಯಾಲಯದ ಮುಂದೆ ನೋಡಿರುತ್ತೇನೆ ಎಂದರೆ ಸಾಕ್ಷಿಯು ನಾನು ಸ್ಥಳದಲ್ಲಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ 3 ನೇ ಆರೋಪಿ ಪರ ಶ್ರೀ ಜಿ ಆರ್ ಹೆಚ್ ವಕೀಲರಿಂದಃ**

9. ಪೊಲೀಸರು ಆ ದಿನ ಗೌರಿಬಿದನೂರು ಬೈಪಾಸ್ ಬಳಿ ನನ್ನನ್ನು ಇಲಾಖಾ ವಾಹನದಲ್ಲಿ ಕರೆದುಕೊಂಡು ಹೋದರು. ಸದರಿ ವಾಹನದಲ್ಲಿ ಎಷ್ಟು ಜನ ಪೊಲೀಸರು ಇದ್ದರು , ಅವರ ಹೆಸರು ನನಗೆ ತಿಳಿದಿಲ್ಲ. 1 ರಿಂದ 4 ನೇ ಆರೋಪಿತರ ಹೆಸರು ತಿಳಿದಿದ್ದು ಆರೋಪಿತರ ತಂದೆಯ ಹೆಸರು ಹಾಗೂ ಅವರು ಏನು ಕಸಬು ಮಾಡುತ್ತಾರೆ ಎಂದು ನನಗೆ ತಿಳಿದಿಲ್ಲ. ನಾನು ನೋಡಿದಂತಹ ದೊಣ್ಣೆ 26 ಇಂಚು ಉದ್ದ, 2 ಇಂಚು ಅಗಲ ಇತ್ತು. ಸದರಿ ದೊಣ್ಣೆಯ ಅಳತೆಯನ್ನು ನಾನು ಸ್ಥಳದಲ್ಲಿ ಮಾಡಿಲ್ಲ. ಆರೋಪಿತರ ಪೈಕಿ ಯಾವ ಆರೋಪಿ ಮು.ಮಾ 6 ದೊಣ್ಣೆಯಿಂದ ವಿಶ್ವನಾಥಗೆ ಹಲ್ಲೆ ಮಾಡಿದರು ಎಂದು ಪೊಲೀಸರು ನನಗೆ ತಿಳಿಸಲಿಲ್ಲ. 4 ಜನ ಆರೋಪಿತರು ಒಂದೇ ದೊಣ್ಣೆಯಿಂದ ಹೊಡೆದಿರುತ್ತಾರೆ ಎಂದು ತಿಳಿಸಿರುತ್ತಾರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿದಿರುತ್ತಾರೆ.

10. ಆ ದಿನ 4 ಜನ ಆರೋಪಿತರನ್ನು ನಾನು ಸ್ಥಳದಲ್ಲಿ ನೋಡಿಲ್ಲ, ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸ್ಥಳಕ್ಕೆ ಹೋಗಿರಲಿಲ್ಲ, ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ನಿ.ಪಿ 41 ಹಾಗೂ 42 ಕ್ಕೆ ನಾನು ಸ್ಥಳದಲ್ಲಿ ಸಹಿ ಮಾಡದೆ ಠಾಣೆಯಲ್ಲಿ ಸಹಿ ಮಾಡಿದ್ದರು ಸಹ ನಾನು ಸರ್ಕಾರಿ ಅಧಿಕಾರಿಯಾದ ಕಾರಣ ಪೊಲೀಸರ ಮಾತು ಕೇಳಿ ಸ್ಥಳದಲ್ಲಿ ಸಹಿ ಮಾಡಿರುವುದಾಗಿ ಸುಳ್ಳು ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಯಾವುದೇ ಆರೋಪಿತರನ್ನು ನೋಡದೆ ಅವರನ್ನು ಪೊಲೀಸ್ ಠಾಣೆಯಲ್ಲಿ ನೋಡಿದ್ದೆನು ಎಂದರೆ ಸರಿಯಲ್ಲ.

11. ಆ ದಿನ ಮೊದಲನೇ ಮಹಜರ್ ನ್ನು ಮಧ್ಯಾಹ್ನ 1.00 ಗಂಟೆಯಿಂದ 3.00 ವರಗೆ ಬರೆದಿದ್ದು, 2 ನೇ ಮಹಜರ್ ನ್ನು ಮಧ್ಯಾಹ್ನ 3.30 ಗಂಟೆಯಿಂದ 4.30 ವರಗೆ ಬರೆದಿರುತ್ತಾರೆ. ನಾನು ಯಾವುದೇ ಹೇಳಿಕೆ ನೀಡಿಲ್ಲ , ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆ</u>: ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 21.11.2024 ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು )**

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

**(ಎಸ್. ಶ್ರೀಧರ)**

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.